ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಬಂಗಾರಪೇಟೆ

ಸಿಸಿ ಸಂಖ್ಯೆ: 29/2021    **CW**-4     **PW**-4

ಸಾಕ್ಷಿಯನ್ನು ದಿಃ 02.08.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಹೆಸರುಃ ಮಂಜುನಾಥ್**

**ತಂದೆ ಹೆಸರುಃ ಗುವ್ವಪ್ಪ**

**ವಯಸ್ಸುಃ 30**

**ವೃತ್ತಿಃ ಚಾಲಕ**

**ವಾಸ ಸ್ಥಳಃ** ಆಲಂಬಳ್ಳಿ

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಚಾಸಾ 3 ತಾಯಿ. ಚಾಸಾ 2 ನನ್ನ ಅಣ್ಣ , ಚಾಸಾ 1 ನನ್ನ ಅತ್ತಿಗೆ , ಚಾಸಾ 5 ನನ್ನ ತಂದೆ. ಆರೋಪಿಗಳು ನಮ್ಮ ಸಂಬಂಧಿಕರಾಗಿದ್ದು ನಮ್ಮ ಜಮೀನಿನ ಪಕ್ಕ ಆರೋಪಿಗಳ ಜಮೀನು ಬರುತ್ತದೆ.  ಆಲಂಬಳ್ಳಿ ಗ್ರಾಮದ ಸರ್ವೆ ನಂ.121/7 ನಮಗೆ ಸೇರಿರುತ್ತದೆ. ಸದರಿ ಜಮೀನನ್ನು ಸರ್ವೆ ಮಾಡಲು ಅಧಿಕಾರಿಗಳು ದಿನಾಂಕ 20-10-2020 ರಂದು ಬಂದಿದ್ದರು. ಅವರು ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಚೆಕ್ಕುಬಂದಿಗಳನ್ನು ಗುರುತಿಸುವಾಗ ಆರೋಪಿ 4 ರಿಂದ 7 ರವರು ಬಂದು ಗಲಾಟೆ ತೆಗೆದಿರುತ್ತಾರೆ. ಆರೋಪಿ 4 ರಿಂದ 7 ರವರು ಚಾಸಾ 2 ರವರಿಗೆ ಕೈಗಳಿಂದ ಹೊಡೆದು ಉಗುರಿನಿಂದ ಪರಿಚಿರುತ್ತಾರೆ.  ಈ ಸಂಬಂಧ ಚಾಸಾ 2 ರವರು ಬಂಗಾರಪೇಟೆ ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು.

ಅದೇದಿನ ಸಂಜೆ 5.30  ರ ಸಮಯದಲ್ಲಿ ಚಾಸಾ 1 ರವರು ನಮ್ಮ ಮನೆಯ ಬಳಿ ಇರುವ ಬಂಡೆಯ ಹತ್ತಿರ  ಹಸುಗಳ ಕಸವನ್ನು ಗುಡಿಸುತ್ತಿದ್ದರು. ಆಗ ಆರೋಪಿ 1 ರಿಂದ 3 ರವರು ಬಂದು ಚಾಸಾ 1 ರವರ ಜೊತೆ ಜಗಳ ತೆಗೆದು ಅವರಿಗೆ ಸೂಳೆ ಮುಂಡೆ ಎಂದು ಬೈದು, ಇವಳನ್ನು ಮುಗಿಸಬೇಕು ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ಆರೋಪಿ2  ರವರು ಚಾಸಾ 1 ರವರ ಎಡಕೈ ನ್ನು ತಿರುವಿರುತ್ತಾರೆ. ಆರೋಪಿ 3 ರವರು ಚಾಸಾ 1 ರವರನ್ನು ನೆಲಕ್ಕೆ ಹಾಕಿ ಒದೆಯುತ್ತಿದ್ದರು.  ಆರೋಪಿ 1

ರವರು ದೊಣ್ಣೆಯಿಂದ ಚಾಸಾ 1 ರವರ ತಲೆಗೆ ಹೊಡೆದು ಗಾಯಗೊಳಿಸಿರುತ್ತಾರೆ. ನಾನು ಸದರಿ ವಿಚಾರವನ್ನು ತಿಳಿದು ಮನೆಯಿಂದ ಹೋಗಿ ಗಾಯಗೊಂಡಿದ್ದ ಚಾಸಾ 1 ರವರನ್ನು ಬಂಗಾರಪೇಟೆ ಸಾರ್ವಜನಿಕ ಆಸ್ಪತ್ರೆಗೆ ತಂದು ಸೇರಿಸಿರುತ್ತೇನೆ. ಈಗ ನ್ಯಾಯಾಲಯದ ಮುಂದಿರುವ ದೊಣ್ಣೆಯಿಂದ ಆರೋಪಿ 1 ರವರು ಹಲ್ಲೆ ಮಾಡಿರುತ್ತಾರೆ. ಸದರಿ ದೊಣ್ಣೆಯನ್ನು ಈಗಾಗಲೇ ಮು.ಮಾ 1 ಎಂದು ಗುರುತಿಸಲಾಗಿರುತ್ತದೆ.

**<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ.ಎ.ಎಂ.ಆರ್ ವಕೀಲರಿಂದಃ</u>**

ಬಂಡೆ ಇರುವ ಜಾಗ ಸುಮಾರು 200 ಅಡಿ ಅಗಲ ಇರುತ್ತದೆ ಎಂದರೆ ಸರಿ. ಸದರಿ ಬಂಡೆಯಿಂದ ಪಶ್ಚಿಮಕ್ಕೆ 5 ನೇ ಆರೋಪಿ ಜಮೀನು ಬರುತ್ತದೆ ಎಂದರೆ ಸರಿ. 5 ನೇ ಆರೋಪಿಯ ಜಾಗದ ನಂತರ ಪಶ್ಚಿಮಕ್ಕೆ ನಮ್ಮ ಜಾಗ ಬರುತ್ತದೆ. ಆರೋಪಿಗಳ ಜಮೀನಿಗೆ ಸಂಬಂಧಪಟ್ಟಂತೆ ಗ್ರಾಮ ನಕಾಶೆಯಲ್ಲಿ ದಾರಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಜಮೀನಿನಲ್ಲಿ ಗಲಾಟೆಯಾಗಿರುತ್ತದೆ. ಚಾಸಾ 2 ರವರ ಬೆನ್ನು ಮತ್ತು ಮುಖದ ಮೇಲೆ ಪರಿಚಿದ್ದರು. ಗಲಾಟೆ ನಡೆಯುವಾಗ ಸಾಕಷ್ಟು ಜನರು ನಿಂತು ನೋಡುತ್ತಿದ್ದರು ಅವರ ಹೆಸರನ್ನು ನನಗೆ ಹೇಳಲು ಆಗುವುದಿಲ್ಲ. ಹೊಲ ಮತ್ತು ಬಂಡೆ ನಮ್ಮ ಮನೆಯಿಂದ ಕಾಣಿಸುವುದಿಲ್ಲ. ನಾನು ಚಾಸಾ 2 ಮತ್ತು 5 ರವರು ಆಸ್ಪತ್ರೆಗೆ ಬಂದಿದ್ದೆವು. ಅರ್ಧ ಗಂಟೆ ಆಸ್ಪತ್ರೆಯಲ್ಲಿ ಇದ್ದು ನಂತರ ಊರಿಗೆ ಹೋಗಿರುತ್ತೇನೆ.

ನಾನು ಮನೆಯಲ್ಲಿ ಇದ್ದಾಗ ಗಲಾಟೆ ಶಬ್ದ ಕೇಳಿತು ಮತ್ತು ನನ್ನ ತಾಯಿ ಸಹಾ ಗಲಾಟೆ ಬಗ್ಗೆ ತಿಳಿಸಿದರು ತಕ್ಷಣ ನಾನು ಹೋದೆನು. ನಾನು ಹೋದಾಗ ಚಾಸಾ 1 ರವರು ಪ್ರಜ್ಞೆ ತಪ್ಪಿ ಬಿದಿದ್ದರು. ನಾನು ವಾಹನದಲ್ಲಿ ಕರೆದುಕೊಂಡು ಹೋಗುವಾಗ ಯಾವ ಆರೋಪಿಗಳು ಹಲ್ಲೆ ಮಾಡಿರುತ್ತಾರೆಂದು ಚಾಸಾ 1 ರವರು ನನಗೆ ತಿಳಿಸಿದರು. ನಾನು ಸದರಿ ಗಲಾಟೆಯಾದ ಜಾಗದಲ್ಲಿ ಯಾರು ನಿಂತಿದ್ದರು ಎಂದು ನೋಡಲಿಲ್ಲ. ದೊಣ್ಣೆಯನ್ನು ಅಲ್ಲಿಯೇ ಬಿಸಾಡಿದ್ದರು. ನಾನು ದೊಣ್ಣೆಯನ್ನು ತೆಗೆದುಕೊಂಡು ಹೋಗಿ ಪೊಲೀಸ್ ಠಾಣೆಗೆ ಕೊಟ್ಟಿಲ್ಲ. ನಾನು ಮಧ್ಯಾಹ್ನ ಗಲಾಟೆಯ ಬಗ್ಗೆ ಪೊಲೀಸ್ ಠಾಣೆಗೆ ಹೋಗಿ ದೂರು ಸಲ್ಲಿಸಿಲ್ಲ. ಚಾಸಾ 2 ರವರು ಎರಡು–ಮೂರು ದಿನ

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಚಾಸಾ 1 ರವರು ಆಸ್ಪತ್ರೆಯಲ್ಲಿ ಮೂರು–ನಾಲ್ಕು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ. ನಾನೇ ಅವರಿಗೆ ಊಟ ತಂದುಕೊಡುತ್ತಿದ್ದೆನು. ಆ ದಿನ ಮಧ್ಯಾಹ್ನ ಯಾವುದೇ ಗಲಾಟೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸಂಜೆ ಗಲಾಟೆಯಾದ ಸಮಯದಲ್ಲಿ ನಾನು ಇರಲಿಲ್ಲ ಎಂದರೆ ಸರಿಯಲ್ಲ. ಸಂಜೆ ಸಹಾ ಯಾವುದೇ ಗಲಾಟೆಯಾಗಿಲ್ಲ ಎಂದರೆ ಸರಿಯಲ್ಲ. ಸರ್ವೆ ವಿಚಾರದಲ್ಲಿ ಮನಸ್ತಾಪ ಇರುವುದರಿಂದ ನಾವು ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ ಹೇ ಕೇ ಸರಿ ಇದೆ.

**(ಕೇಶವಮೂರ್ತಿ.ಬಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಂಗಾರಪೇಟೆ